ನಿಯಮ 334ರ ಮೇರೆಗೆ

1 ಡಾ॥ ಬಿ.ಟಿ. ರಾಮಚಂದ್ರ ಇವರ ಮೇಲೆ ಅನೇಕ ದೂರುಗಳಿದ್ದರೂ ಕಳೆದ ಒಂದೂವರೆ ವರ್ಷದಿಂದ ಯಾವುದೇ ರೀತಿಯಾವಂಥಹ ಕ್ರಮಗಳನ್ನು ತೆಗೆದುಕೊಳ್ಳದೆ ಇರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಶ್ರೀ ಬಿ.ಟಿ. ರಾಮಚಂದ್ರ ಅನ್ನತಕ್ಕಂತಹ ವೈದ್ಯರು ಯಾರಿದ್ದಾರೆ ಇವರ ಬಗ್ಗೆ ಬಹಳ ದೂರುಗಳು ಇದ್ದು ಒಂದೂವರೆ ವರ್ಷದಿಂದ ಯಾವುದೇ ರೀತಿಯಾದಂತಹ ಕ್ರಮವನ್ನು ಇವರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಇವರ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂಬುದು ನನ್ನ ಅಗ್ರಹ.

ಶ್ರೀಮತಿ ವನಿತಾರವಾ ವಂಧ್ಯರಾಜ್.—(ಮಾನ್ಯ ಸಮಾಜ ಕಲ್ಯಾಣ ವಂತ್ರಿಗಳು) ಮಾನ್ಯ ಅಧ್ಯಕ್ಷರೆ ನನ್ನ ಹೇಳಿಕೆ ಈ ರೀತಿ ಇದೆ.

ಬೆಂಗಳೂರು ನಗರ ಮಾಗಡಿ ರಸ್ತೆಯಲ್ಲಿರುವ ಕುಷ್ಟರೋಗ ಆಸ್ಪತ್ರೆಯಲ್ಲಿ ಹಿಂದೆ ವೈದ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಡಾ॥ ಬಿ.ಟಿ. ರಾಮಚಂದ್ರರವರ ವಿರುದ್ಧ ಶ್ರೀ ಕೆ.ಜಿ. ರಾಜನ್, ಫಿಸಿಯೋ ತೆರಪಿಸ್ಟ್, (ಕುಷ್ಟರೋಗ ಆಸ್ಪತ್ರೆ, ಬೆಂಗಳೂರು), ಶ್ರೀ ಕೆ. ಆಯ್ಯಪ್ಪ, ಸೆನೆಟ್ ಸದ್ಯಸರು, ಮಂಗಳೂರು ವಿಶ್ವ ವಿದ್ಯಾನಿಲಯ ಮತ್ತು ಶ್ರೀ ಸಿ. ಗೋಪಾಲ್, ಕರ್ನಾಟಕ ಪತ್ರಿಕಾ ಅಕೆಡೆಮಿ ಇವರುಗಳು ಸರ್ಕಾರಕ್ಕೆ ದೂರುಗಳನ್ನು ಸಲ್ಲಿಸಿದ್ದು, ಡಾ॥ ಬಿ.ಟಿ. ರಾಮಚಂದ್ರರವರು ಅಧಿಕಾರ ದುರುಪಯೋಗಪಡಿಸಿಕೊಂಡಿರುವುದಾಗಿಯೂ, ತಮ್ಮ ಕೈ ಕೆಳಗಿನ ನೌಕರರಿಗೆ ಕಿರುಕುಳ ಕೊಡುತ್ತಿರುವುದಾಗಿಯೂ, ಮತ್ತು ಇತರೆ ದೂರುಗಳು ಬಂದ ಕಾರಣ ಇದರ ಬಗ್ಗೆ ಸತ್ಯಾಂಶವನ್ನು ತಿಳಿಯಲು ಈ ಪ್ರಕರಣವನ್ನು ಸಮಗ್ರ ತನಿಖೆಗಾಗಿ ಸಿ.ಐ.ಡಿ.ಗೆ ವಹಿಸಲಾಗಿತ್ತು.

ಈ ಬಗ್ಗೆ ಸಿ.ಐ.ಡಿ. ತನಿಖೆ ನಡೆದಿದ್ದು ತನಿಖಾ ವರದಿಯ ಪ್ರಕಾರ ಅರ್ಜಿದಾರರ ಆರೋಪಗಳು ಸುಳ್ಳೆಂದು ತಿಳಿದು ಬಂದಿದೆ.

2) ರಾಜ್ಯದ ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರ ಸಂಬಳವನ್ನು ಜಾಸ್ತಿ ಮಾಡಿದ್ದರೂ ಇದನ್ನು ಜಾರಿಗೆ ಕೊಡದಿರುವುದು.

ಶ್ರೀ ಕೆ. ಕಾಶಾಲ.—ಕರ್ನಾಟಕ ರಾಜ್ಯದಾದ್ಯಂತ ಕಂದಾಯ ಇಲಾಖೆಯಲ್ಲಿ ಸುಮಾರು ೧,೮೦೦ ಗ್ರಾಮ ಸಹಾಯಕರು (ತಳಯಾರಿಗಳು) ರೂಪಾಯಿ ೩೦-೦೦ ರಂತೆ ಎಷ್ಟೋ ವರ್ಷಗಳಿಂದ ಜೀತ ಪದ್ಧತಿಯಂತೆ ದುಡಿಯುತ್ತಿದ್ದಾರೆ. ಸದ್ಯಯವರ ಕಷ್ಟವನ್ನು ಹೋಗಲಾಡಿಸಲು ಸರಕಾರದ ಗಮನಕ್ಕೆ ಹಲವು ಬಾರಿ ಒತ್ತಡ ತಂದಂತೆ, ೧೯೮೫ನೇ ಇಸವಿಯಲ್ಲಿ ಸದ್ಯ ಗ್ರಾಮಸಹಾಯಕರ ಸಂಬಳವನ್ನು ಜಾಸ್ತಿಮಾಡಿ ಇವರನ್ನು 'ಡಿ' ಗುಂಪಿನ ನೌಕರರೆಂದು ಪರಿಗಣಿಸಿ, ಇವರ ಪಂಗಲ ವೇತನವನ್ನು ರೂಪಾಯಿ ೭೮೦ ರಿಂದ ೧೦೪೦ ರಂತೆ ನಿಗಧಿ ಪಡಿಸಿ ವೇತನ ಪರಿಷ್ಕರಣವನ್ನು ಮಾಡಲಾಗಿತ್ತು. ಕರ್ನಾಟಕ ಹಣಕಾಸು ಇಲಾಖೆ ರೂಪಾಯಿ ೭೮೦ಕ್ಕೆ ನಿಗಧಿಪಡಿಸಿ, ಜಾರಿಗೊಳಿಸುವಂತೆ ಆದೇಶ ಕೂಡಾ ಹೊರಡಿಸಿರುತ್ತದೆ. ಆದರೆ ಸದ್ಯ ನೌಕರರ ಸಂಬಳವನ್ನು ನೀಡಲು ಸದ್ಯ ಆದೇಶವನ್ನು ಈ ತನಕ ಕಂದಾಯ ಇಲಾಖೆ ಕಾರ್ಯಗತಗೊಳಿಸದೆ. ಗ್ರಾಮ ಸಹಾಯಕರಿಗೆ ತುಂಬಾ ಅನ್ಯಾಯವಾಗಿರುವುದು.

ಆದುದರಿಂದ ಸರ್ಕಾರ ಪರಿಷ್ಕರಣೆಯಂತೆ ನಿಗಧಿಗೊಳಿಸಿದ ಇವರ ಸಂಬಳವನ್ನು ಜಾರಿಗೊಳಿಸುವಲ್ಲಿ ಏನು ಕ್ರಮವನ್ನು ಕೈಗೊಂಡಿದೆ ಎಂದು ತಿಳಿಯ ಬಯಸುತ್ತಾ, ಇದನ್ನು ಜಾರಿಗೊಳಿಸುವಂತೆ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ಹಾಗೂ ಪ್ರವಾಸೋದ್ಯಮ ಮಂತ್ರಿಗಳು).—ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯ್ದೆ ೧೯೬೧ ರನ್ವಯ ಎಲ್ಲಾ ಅನುಪಂಶೀಯ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ದಿನಾಂಕ ೧-೨-೧೯೬೯ ರಿಂದ ರದ್ದುಪಡಿಸಲಾಯಿತು. ಈ ಸ್ಥಾನದಲ್ಲಿದ್ದವರನ್ನು ಆಗಿಂದಾಗ್ಗೆ ಸರ್ಕಾರದ ಆಡಳಿತಾತ್ಮಕ ಆದೇಶಗಳನ್ವಯ ದಿನಾಂಕ. ೩೧-೧೨-೭೮ ರವರೆಗೆ ಗ್ರಾಮಾಯ ವ್ಯವಸ್ಥೆ ಮಾಡುವ ತನಕ ಮುಂದುವರಿಸಲಾಯಿತು. ಸರ್ಕಾರವು ಆದೇಶ ಸಂಖ್ಯೆ

ಆರ್‌ಡಿ ೩ ಎಂವಿಎಸ್ ೭೭, ದಿನಾಂಕ ೧೬-೬-೭೮ ರಲ್ಲಿ ಆಳ್ವಿ ಸ್ಟೈಫಂಡರಿ ಗ್ರಾಮ ಸಹಾಯಕರ ಹುದ್ದೆಗಳನ್ನು ಹಳ್ಳಿಯವರಿಗೆ ಮತ್ತು ಗ್ರಾಮಲೆಕ್ಕಾಧಿಕಾರಿಗಳಿಗೆ ಸಹಾಯ ಮಾಡಲು ತಿಂಗಳಿಗೆ ೧೦೦ ರೂ. ಗಳ ನಿಗದಿತ ಸಂಭಾವನೆ ಮೇಲೆ ಮಂಜೂರು ಮಾಡಲಾಗಿದೆ. ಈ ನಿಗದಿತ ಮಾಸಿಕ ಸಂಭಾವನೆ ರೂ. ೧೦೦ನ್ನು ರೂ. ೧೨೦ ಗಳಿಗೆ ದಿನಾಂಕ ೫-೬-೧೯೬೧ರ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೨೩೨ ಎಂವಿಎಸ್ ೬೧ರಲ್ಲಿ ಹೆಚ್ಚಿಸಲಾಯಿತು. ಪುನಃ ೧೫೧೯, ಹೆಚ್ಚುವರಿ ಸ್ಟೈಫಂಡರಿ ಗ್ರಾಮ ಸಹಾಯಕ ಹುದ್ದೆಗಳನ್ನು ನಿಗದಿತ ತಿಂಗಳ ಸಂಭಾವನೆ ರೂ ೧೨೦ ರಂತೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೮೨ ಎಂವಿಎಸ್ (೧) ೮೨, ದಿನಾಂಕ ೨೩-೯-೮೨ರ ಆದೇಶದಲ್ಲಿ ಮಂಜೂರು ಮಾಡಲಾಯಿತು. ಗ್ರಾಮ ಸಹಾಯಕ ಬೇಡಿಕೆ ಮೇರೆಗೆ ನಿಗದಿತ ಸಂಭಾವನೆ ೧೨೦ ರೂ. ಗಳನ್ನು ೧೫೦ ರೂ. ಗಳಿಗೆ ದಿನಾಂಕ. ೪-೧-೮೬ ರಿಂದ ಜಾರಿಗೆ ಬರುವಂತೆ ಆದೇಶ ಸಂಖ್ಯೆ ಆರ್‌ಡಿ ೧೨೦ ಎಂವಿಎಸ್ ೮೬, ದಿನಾಂಕ. ೭-೫-೮೬ರ ಆದೇಶದಂತೆ ಹೆಚ್ಚಿಸಲಾಯಿತು ಮತ್ತೆ ೧೫೦ ರೂ. ಗಳನ್ನು ದಿನಾಂಕ. ೧-೧೧-೮೬ರಿಂದ ಜಾರಿಗೆ ಬರುವಂತೆ ೩೦೦ ರೂ. ಗಳಿಗೆ ಹೆಚ್ಚಿಸಲಾಗಿದೆ. ಗ್ರಾಮ ಸಹಾಯಕರನ್ನು 'ಡಿ' ದರ್ಜೆಗೆ ಸರಿಸಮಾನಗೊಳಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.
೧-೪೦ ಪಿ. ಎಂ.

೩) ವಿದ್ಯುತ್ ಮಂಡಳಿಯ ವೃತ್ತ ಕಛೇರಿಯನ್ನು ಮಂಗಳೂರಿನಲ್ಲಿ ತೆರೆಯಲು ಒತ್ತಾಯ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್‌ಗೆ ಸಂಬಂಧಪಟ್ಟ ವಿಚಾರಗಳಿಗೆ ವ್ಯವಹರಿಸಲು ಕರ್ನಾಟಕ ವಿದ್ಯುತ್ ಮಂಡಲಿಯ ವೃತ್ತ ಕಛೇರಿಯು ಶಿವಮೊಗ್ಗದಲ್ಲಿದ್ದು ೪೦ ಹೆಚ್.ಪಿ.ಯ ರೂ. ೨೫,೨೦೦.೦೦ ಯೋಜನೆಯ ಅಂದಾಜಿಂಗಳ ಮಂಜೂರಾತಿಗೆ ಮಾನ್ಯತೆ ಮತ್ತು ಸ್ಥಳ ಪರೀಕ್ಷೆಗಳಿಗೆ ಮೇಲಿನ ಕಛೇರಿಯನ್ನೇ ಪೂರ್ತಿ ಅವಲಂಬಿಸ ಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಬಹಳಷ್ಟು ಗಾತ್ರದಲ್ಲಿ ಬೆಳೆದಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಮಂಗಳೂರು ಎಲ್ಲಾ ಕೈಗಾರಿಕೆ, ವಾಣಿಜ್ಯ, ವೈದ್ಯಕೀಯ, ವಿದ್ಯಾ ಕ್ಷೇತ್ರ, ಬಂಡರು, ವಿಮಾನಗಾರಿಕೆ ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣವೇ ಮೊದಲಾದ ಕ್ಷೇತ್ರಗಳಿಗೆ ಮತ್ತು ವ್ಯವಸಾಯವೇ ಮೊದಲಾದ ಆಗತ್ಯತೆಗಳ ದೃಷ್ಟಿಯಿಂದಲೂ ವೃತ್ತ ಕಛೇರಿಯನ್ನು ಮಂಗಳೂರಿನಲ್ಲಿ ತೆರೆಯಬೇಕಾಗಿ ಮಾನ್ಯ ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಖಾತೆಯ ಮಂತ್ರಿಗಳು) —ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್‌ಗೆ ಸಂಬಂಧಪಟ್ಟ ವಿಚಾರಗಳಿಗೆ ವ್ಯವಹರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ವೃತ್ತ ಕಛೇರಿಯು ಶಿವಮೊಗ್ಗದಲ್ಲಿದ್ದು ೪೦ ಹೆಚ್.ಪಿ. ಮತ್ತು ರೂ. ೨೫,೦೦೦ ಗಳಿಗೆ ಮೇಲ್ಪಟ್ಟು ಯೋಜನೆಯ ಅಂದಾಜುಗಳ ಮಂಜೂರಾತಿಗೆ ಮಾನ್ಯತೆ ಮತ್ತು ಸ್ಥಳ ಪರೀಕ್ಷೆಗಳಿಗೆ ಮೇಲಿನ ಕಛೇರಿಯನ್ನೇ ಪೂರ್ತಿ ಅವಲಂಬಿಸಬೇಕಾಗಿದೆ. ಆದರೆ ಇತರೇ ಸಂದರ್ಭದಲ್ಲಿ ಬಹಳಷ್ಟು ಗಾತ್ರದಲ್ಲಿ ಬೆಳೆದಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಮಂಗಳೂರು ಎಲ್ಲಾ ಕೈಗಾರಿಕೆಗೆ ವಾಣಿಜ್ಯ, ವೈದ್ಯಕೀಯ, ವಿದ್ಯಾಕ್ಷೇತ್ರ, ಬಂದರು, ವಿಮಾನಗಾರಿಕೆ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣವೇ ಮೊದಲಾದ ಕ್ಷೇತ್ರಗಳಿಗೆ ಮತ್ತು ವ್ಯವಸಾಯವೇ ಮೊದಲಾದ ಆಗತ್ಯತೆಗಳ ದೃಷ್ಟಿಯಿಂದಲೂ ವೃತ್ತ ಕಛೇರಿಯನ್ನು ಮಂಗಳೂರಿನಲ್ಲಿ ತೆರೆಯಬೇಕಾಗಿ ಮಾನ್ಯ ವಿಧಾನ ಸಭಾ ಸದಸ್ಯರು ಅವರ ಸೂಚನೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮತ್ತು ಉಡುಪಿಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ವಿಭಾಗ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ ಈ ವಿಭಾಗಗಳು ಶಿವಮೊಗ್ಗ ವೃತ್ತದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಅಲ್ಲದೆ ಮಂಗಳೂರಿನಲ್ಲಿ ಮಂಡಲಿಯ ವಲಯ ಕಛೇರಿಯು ಒಬ್ಬ ಮುಖ್ಯ ಇಂಜಿನಿಯರ್‌ರವರ ನೇತೃತ್ವದಲ್ಲಿ ೧೯೮೩ ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ವಲಯ ವ್ಯಾಪ್ತಿಗೆ ಶಿವಮೊಗ್ಗ ಮತ್ತು ಮೈಸೂರು ವೃತ್ತಗಳು ಬರುತ್ತವೆ. ಶಿವಮೊಗ್ಗ ವೃತ್ತವನ್ನು ವಿಭಜಿಸಿ ಮಂಗಳೂರಿನಲ್ಲಿ ಒಂದು ವೃತ್ತ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆಯು ಮಂಡಲಿಯ ಮುಂದಿದೆ. ಆದರೆ ಸದ್ಯದ ಮಂಡಲಿಯ ಆರ್ಥಿಕ ಪರಿಸ್ಥಿತಿಯಲ್ಲಿ ಇವನ್ನು ಪ್ರಾರಂಭಿಸಲು ಸಾಧ್ಯವಿಲ್ಲವಾಗಿ ಪ್ರಸ್ತಾವನೆಯನ್ನು ಮುಂದೂಡಲಾಗಿದೆ. ಮಂಡಲಿಯು ಆರ್ಥಿಕ ಪರಿಸ್ಥಿತಿಯು ಉತ್ತಮಗೊಂಡ ನಂತರ ಈ ಪ್ರಸ್ತಾವನೆಯನ್ನು ಪುನಃ ಪರಿಶೀಲಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.